**ಸಾಕ್ಷಿಯನ್ನು ದಿಃ 24.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಕೆ ಆರ್ ವಿ. ವಕೀಲರಿಂದಃ**

1) ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಈ ಅರ್ಜಿಯಲ್ಲಿ ಸಲ್ಲಿಸಿರುವ ತಕರಾರು ಮತ್ತು ಮುಖ್ಯ ಅರ್ಜಿಯಲ್ಲಿ ಸಲ್ಲಿಸಿರುವ ಅಂಶಗಳು ಗೊತ್ತು. ನಾನು ಜಮೀನು ಬರಬೇಕೆಂದು ತಕರಾರು ಸಲ್ಲಿಸಿದ್ದೇನೆ. ನನ್ನ ತಾತ ಮತ್ತು ಅಜ್ಜಿ ದೇವಿಗೆರೆ ಊರಿನವರು. ನನ್ನ ತಾತ ಹೊನ್ನಮಾರನಹಳ್ಳಿ ಗ್ರಾಮದವರು ಎಂದರೆ ಸರಿಯಲ್ಲ. ನನ್ನ ತಾತ ಹೊನ್ನಮಾರನಹಳ್ಳಿಯಿಂದ ನನ್ನ ಅಜ್ಜಿಯ ಊರಾದ ದೇವಿಗೆರೆ ಊರಿಗೆ ಬಂದು ಅಜ್ಜಿಯೊಂದಿಗೆ ವಾಸವಿದ್ದರು ಎಂದರೆ ಸರಿಯಲ್ಲ. ಎಲ್ಲಾ ಅಂಶಗಳು ಗೊತ್ತಿದ್ದರು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2) ಅರ್ಜಿದಾರರು ಪೋಲೀಸ್ ಆಗಿದ್ದು, ಬೆಂಗಳೂರಿನಲ್ಲಿ ವಾಸವಿದ್ದಾರೆ. ಅರ್ಜಿದಾರರು ಯಾವ ಇಸವಿಯಲ್ಲಿ ಕೆಲಸಕ್ಕೆ ಸೇರಿಕೊಂಡು ಎಂದು ಗೊತ್ತಿಲ್ಲ. ಅಸಲು ದಾವೆ ಸಲ್ಲಿಸುವ ಎಷ್ಟು ವರ್ಷದ ಹಿಂದೆ ಪೋಲೀಸ್ ಆಗಿದ್ದರು ಎಂದು ಗೊತ್ತಿಲ್ಲ. ನಾನು ಅಸಲು ದಾವೆ ಹೂಡುವ **6** ವರ್ಷದ ಮೊದಲೇ ಪೋಲೀಸ್ ಕೆಲಸಕ್ಕೆ ಸೇರಿದ್ದರು ಎಂದು ಸಾಕ್ಷಿ ಇನ್ನು ಹೆಚ್ಚು ವರ್ಷಗಳ ಹಿಂದೆ ಪೋಲೀಸ್ ಕೆಲಸದಲ್ಲಿ ಇದ್ದರು ಎನ್ನುತ್ತಾರೆ. ಅರ್ಜಿದಾರರು ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದು ಅಸಲು ದಾವೆ ಹೂಡುವ ಸಮಯದಲ್ಲಿ ವಕೀಲರಿಗೆ ತಿಳಿಸಿಲ್ಲ. ಬೆಂಗಳೂರಿನಲ್ಲಿ ವಾಸವಿದ್ದರು ಎಂದು ವಕೀಲರಿಗೆ ಮಾಹಿತಿ ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

**3**) ಅಸಲು ದಾವೆಯಲ್ಲಿ ಅರ್ಜಿದಾರರ ಬೆಂಗಳೂರಿನ ವಿಳಾಸವನ್ನು ನಮೂದಿಸಿಲ್ಲ ಎಂದರೆ ಸರಿ. ಅರ್ಜಿದಾರರ ಊರಿನ ವಿಳಾಸಕ್ಕೆ ಅಸಲು ದಾವೆಯ ಸಮನ್ಸ್

ಜಾರಿಯಾಗಿರುತ್ತದೆ. ಯಾವ ಪೇಪರ್ ನಲ್ಲಿ ಪ್ರಕಟಿಸಲಾಯಿತು ಎಂದು ಗೊತ್ತಿಲ್ಲ. ಪತ್ರಿಕೆಯ ಹೆಸರನ್ನು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿದ್ದೇನೊ ಇಲ್ಲವೊ ನೆನಪಿಲ್ಲ. ಇಂಚರ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು ಎಂದರೆ ನೆನಪಿಲ್ಲ. ಸದರಿ ಪತ್ರಿಕೆ ಹಾಸನದಲ್ಲಿ ಮಾತ್ರ ಚಲಾವಣೆಯಲ್ಲಿದೆ ಎಂದರೆ ಸರಿ. ಅರ್ಜಿದಾರರ ಸಮನ್ಸ್ ನ್ನು ರಾಜ್ಯ ದಿನಪತ್ರಿಕೆಯಲ್ಲಿ ಪ್ರಕಟಿಸಲು ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ.

4) ಅಸಲು ದಾವೆಯಲ್ಲಿ ಅರ್ಜಿದಾರರಿಗೆ ಸಮನ್ಸ್ ಜಾರಿಯಾಗುವುದನ್ನು ತಪ್ಪಿಸಲು ಜಿಲ್ಲಾ ಮಟ್ಟದ ಪತ್ರಿಕೆಯಲ್ಲಿ ಮಾತ್ರ ಪ್ರಕಟಿಸಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರ ಬೆಂಗಳೂರಿನ ವಿಳಾಸ ನನಗೆ ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಅಸಲು ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅರ್ಜಿದಾರರು ಆಗಾಗ ಊರಿಗೆ ಬರದೇಇದ್ದರು ಬರುತ್ತಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5) ಅಸಲು ದಾವೆಯಲ್ಲಿ ಡಿಕ್ರಿ ಪಡೆದ ನಂತರ ಎಫ್ ಡಿ ಪಿ 19/2018 ರ ರೀತ್ಯಾ ಅರ್ಜಿ ಸಲ್ಲಿಸಿದ್ದು, ಇನ್ನು ವಿಚಾರಣೆಯಲ್ಲಿದೆ ಎಂದರೆ ಸರಿ. ಎಫ್ ಡಿ ಪಿ ಯಲ್ಲಿ ಅರ್ಜಿದಾರರ ಊರಿನ ವಿಳಾಸಕ್ಕೆ ನೋಟೀಸ್ ನೀಡಿರುತ್ತೇವೆ. ಎಫ್ ಡಿ ಪಿ ಯಲ್ಲಿ ಅರ್ಜಿದಾರರ ಬೆಂಗಳೂರಿನ ಪೊಲೀಸ್ ಕ್ವಾಟ್ರಸ್ ವಿಳಾಸಕ್ಕೆ ನೋಟೀಸ್ ನೀಡಿದ್ದೇನೆ ಎಂದರೆ ಸರಿಯಲ್ಲ. ಬೆಂಗಳೂರಿನ ವಿಳಾಸಕ್ಕೆ ಎಫ್ ಡಿ ಪಿ ಯಲ್ಲಿ ನೋಟೀಸ್ ಜಾರಿಯಾದ ನಂತರ ಅರ್ಜಿದಾರರಿಗೆ ಅಸಲು ದಾವೆಯ ಬಗ್ಗೆ ತಿಳಿಯಿತು ಎಂದರೆ ಸರಿಯಲ್ಲ. ನಂತರ ಅರ್ಜಿದಾರರು ಅಸಲು ದಾವೆಯ ಬಗ್ಗೆ ವಿಚಾರಿಸಿದಾಗ ಅರ್ಜಿದಾರರ ಊರಿನ ವಿಳಾಸ ಅಸಲು ದಾವೆಯಲ್ಲಿ ನೀಡಿರುವ ಬಗ್ಗೆ ತಿಳಿಯಿತು ಎಂದರೆ ಸರಿಯಲ್ಲ. ಆಸ್ತಿಯನ್ನು ಹೊಡೆಯುವ ಉದ್ದೇಶದಿಂದ

ಅರ್ಜಿದಾರರ ತಪ್ಪು ವಿಳಾಸವನ್ನು ನೀಡಿ ಇತರೆ ಎದುರುದಾರರೊಂದಿಗೆ ಷರೀಕಾಗಿ ಏಕಪಕ್ಷೀಯ ಡಿಕ್ರಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

6) ನನ್ನ ತಾತನ ಸ್ವಯಾರ್ಜಿತ ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿ ಎಂದುಅಸಲು ದಾವೆಯಲ್ಲಿ ನಮೂದಿಸಿ ಏಕಪಕ್ಷೀಯ ಡಿಕ್ರಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆಯ ಸ್ವತ್ತುಗಳು ಸ್ವಯಾರ್ಜಿತ ಅಥವಾ ಪಿತ್ರಾರ್ಜಿತ ಸ್ವತ್ತುಗಳು ಎಂದು ವಿಚಾರಣೆಗೊಳಪಡಿಸಲು ನನ್ನಿಂದ ಯಾವುದೇ ತಕರಾರು ಇಲ್ಲ ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**